**ಓ ಎಸ್ ನಂಃ 138-17**
**ಡಿ ಡಬ್ಲ್ಯೂ ಃ 1**

**ದಿಃ 09-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

34. ಸರೋಜಮ್ಮರವರು ನನ್ನ ದೊಡ್ಡಮ್ಮ ಆಗಿರುತ್ತಾರೆ. ಸರೋಜಮ್ಮರವರಿಗೆ 1970 ರ ವಿಭಾಗದಂತೆ 4 ಎಕರೆ ಮತ್ತು 1 ಎಕರೆ ಜಮೀನು ಪ್ರತ್ಯೇಕವಾಗಿ ಬಂದಿರುತ್ತದೆ ಎಂದರೆ ನಿಜ. 4 ಎಕರೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಕೆ ಮುನಿಸ್ವಾಮಿರವರ ಜಮೀನು, ಪಶ್ಚಿಮಕ್ಕೆ ಇದೇ ನಂಬರ್ ಪೈಕಿ ಕೆ ಟಿ ವಿಶ್ವನಾಥ್ ರವರ ಜಮೀನು, ಉತ್ತರಕ್ಕೆ ಕೆ ಟಿ ವಿಜಯಕುಮಾರ್ ರವರ ಜಮೀನು, ದಕ್ಷಿಣಕ್ಕೆ ನಂಜಮ್ಮರವರ ಜಮೀನು ಎಂದರೆ ನಿಜ. ಅದೇ ರೀತಿ 1 ಎಕರೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕೆ ಟಿ ರಾಜಶೇಖರ್ ರವರ ಜಮೀನು, ಉತ್ತರಕ್ಕೆ ರಸ್ತೆ ಹಾಗೂ ಗ್ರಾಮ, ದಕ್ಷಿಣಕ್ಕೆ ಹಳ್ಳ ಎಂದರೆ ನಿಜ. ನಿಡಿ1 ರಲ್ಲಿ 1970 ರ ವಿಭಾಗ ಪತ್ರದ ಬಗ್ಗೆ ನಮೂದು ಇಲ್ಲ ಎಂದರೆ ನಿಜ.

35. ನಿಡಿ1 ರ ಜಮೀನಿನ ಪೂರ್ವಕ್ಕೆ ತೋಟ ಜಮೀನು ಎಂದು ತೋರಿಸಲಾಗಿದೆ. ಸರ್ವೆ ನಂ 62 ರ ಸುತ್ತಲೂ ತೋಟ ಜಮೀನು ಇರುವುದಿಲ್ಲ ಎಂದರೆ ಆ ಜಮೀನನ್ನು ಖರೀದಿ ಮಾಡುವಾಗ ತೋಟ ಜಮೀನು ಇದ್ದು ಈಗ ಇರುವುದಿಲ್ಲ ಎಂದು ಹೇಳುತ್ತಾರೆ. ನಿಡಿ1 ಆಗುವಾಗ ಜಮೀನಿನ ಪೂರ್ವಕ್ಕೆ ತೋಟ ಜಮೀನು ಇತ್ತು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ. ಸರ್ವೆ ನಂ 62 ರ ಯಾವುದೇ ಭಾಗದಲ್ಲಿ ತೋಟ ಜಮೀನು ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಕಂದಾಯ ದಾಖಲೆಗಳಲ್ಲಿ ತೋಟ ಜಮೀನಿನ ಬಗ್ಗೆ ನಮೂದು ಇದೆಯಾ ಎಂದರೆ ಗೊತ್ತಿಲ್ಲ. ನಾನು ಖರೀದಿ ಮಾಡಿದ ಜಮೀನಿನ ಪಶ್ಚಿಮ, ಪೂರ್ವ ಮತ್ತು ಉತ್ತರದ ಜಮೀನುಗಳು ಪೋಡಿಯಾದ ನಂತರ ನಾವು ಖರೀದಿ ಮಾಡಿರುತ್ತೇವೆ ಎಂದರೆ ನಿಜ. ನಾನು ಖರೀದಿ ಮಾಡಿದ 4 ಎಕರೆ ಜಮೀನಿನ ದಕ್ಷಿಣಕ್ಕೆ ದಾವಾ ಆಸ್ತಿ ಬರುತ್ತದೆ. ದಾವಾ ಆಸ್ತಿಗಳು ಸರ್ವೆಯಾಗಿರುವುದಿಲ್ಲ ಮತ್ತು ಪೋಡಿಯಾಗಿರುವುದಿಲ್ಲ ಮತ್ತು ಅದರ ಬಗ್ಗೆ ಸಮಸ್ಯೆಯಾಗಿರುತ್ತದೆ ಎಂದರೆ ನಿಜ. ನಾನು ಮೊದಲನೇ ತಾಕಿನ 5 ಎಕರೆ ಜಮೀನಿನಲ್ಲಿ ಸ್ವಾಧೀನತೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. 2 ನೇ ತಾಕಿನ ದಕ್ಷಿಣಕ್ಕೆ ಹಳ್ಳ ಆದ ನಂತರ ನನ್ನ ಜಮೀನು ಇದೆ, ನಂತರ ನನ್ನ ಸಹೋದರ ಸಹೋದರಿಯ ಜಮೀನು ಇದೆ, ನಂತರ ಯಾರ ಜಮೀನು ಇದೆ ಗೊತ್ತಿಲ್ಲ. ನನ್ನ ಸಹೋದರ ಸಹೋದರಿಯ ಜಮೀನಿನ ವಿಸ್ತೀರ್ಣ ಗೊತ್ತಿಲ್ಲ, ಅಂದಾಜು ಹೇಳಲು ಬರುವುದಿಲ್ಲ. ನಿಡಿ1 ರ 1 ಎಕರೆ ಜಮೀನಿನ ಉತ್ತರಕ್ಕೆ ಗ್ರಾಮಠಾಣ ಎಂದು ಬರೆಯಲಾಗಿದೆ ಎಂದರೆ ನಿಜ. ನಿಡಿ1 ರ 1 ಎಕರೆ ಜಮೀನಿನ ಉತ್ತರಕ್ಕೆ ಗ್ರಾಮಠಾಣ ಇದೆ

ಎಂದು ತೋರಿಸಲು ಏನು ದಾಖಲೆಗಳು ಇವೆ ಗೊತ್ತಿಲ್ಲ. ಈ ಬಗ್ಗೆ ಪರಿಶೀಲನೆ ಮಾಡಿಲ್ಲ ನನ್ನ ತಂದೆಯ ಹೇಳಿಕೆಯ ಆಧಾರದ ಮೇರೆಗೆ ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಡಿ1 ರ ಜಮೀನುಗಳ ಚಕ್ಕುಬಂದಿಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ತೋರಿಸಿದ್ದು ಮೂಲ ಪತ್ರದಲ್ಲಿ ಬೇರೆ ಚಕ್ಕುಬಂದಿ ಇರುತ್ತದೆ ಎಂದರೆ ಸರಿಯಲ್ಲ.

36. ಸಾಕ್ಷಿಗೆ ಈಗ ತಾವು ತಹಶೀಲ್ದಾರ್ ರವರಿಗೆ ಸಲ್ಲಿಸಿದ ಅರ್ಜಿಯ ಪ್ರತಿ, ಎ.ಎ. ರವರ ವರದಿ ಮತ್ತು ನಡವಳಿಕೆಗಳ ದೃಢೀಕೃತ ನಕಲುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಪಿ 38 ರಿಂದ ನಿಪಿ 40 ಎಂದು ಗುರುತಿಸಲಾಯಿತು. ನಿಪಿ38 ರಲ್ಲಿ ತೋರಿಸಿದ ಸರ್ವೆ ನಂಬರ್ 62/5 ಯಾರ ಜಮೀನು ಗೊತ್ತಿಲ್ಲ. ನಿಪಿ 38 ರಲ್ಲಿ ತೋರಿಸಿದ ಸರ್ವೆ ನಂ 62/5 ನನ್ನ ಜಮೀನು ಅಲ್ಲ. ನಿಪಿ38 ರಲ್ಲಿ ತೋರಿಸಿದ ಸರ್ವೆ ನಂ 62/5 ಈ ದಾವೆಯ ಬಿ ದಾವಾ ಆಸ್ತಿ ಎಂದರೆ ಬಿ ದಾವಾ ಆಸ್ತಿ ಇರುವುದಿಲ್ಲ ಎಂದು ಹೇಳುತ್ತಾರೆ. ಬಿ ದಾವಾ ಆಸ್ತಿ ಎ ದಾವಾ ಆಸ್ತಿಯ 20 ಗುಂಟೆ ಜಮೀನು ಇರುತ್ತದೆ ಎಂದರೆ ನಾನು ಪೂರ್ತಿ 4 ಎಕರೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನೆ ಎಂದು ಹೇಳುತ್ತಾರೆ. ನಿಪಿ 38 ರಂತೆ ತಿಳುವಳಿಕೆ ನೋಟಿಸ್ ಬಂದ ನಂತರ ಅಕ್ರಮ ಕಟ್ಟಡವನ್ನು ಕಟ್ಟುವುದು ನಿಲ್ಲಿಸಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ನಿಜ. ನಿಪಿ 38 ದಿನಾಂಕಃ 20-09-2017 ರದ್ದಾಗಿರುತ್ತದೆ ಎಂದರೆ ನಿಜ.

37. ಮಹಾವೀರ್ ಜೈನ್ ಎಂಬುವವರು ಸರ್ವೆ ನಂ 63 ರಲ್ಲಿರುವ ಜಮೀನಿನ ಮಾಲೀಕರು ಎಂದರೆ ಗೊತ್ತಿಲ್ಲ. ಮಹಾವೀರ್ ಜೈನ್ ರವರು ಆಸ್ತಿಯನ್ನು ಸರ್ವೆ ಮಾಡಿಸಿದಾಗ ನನಗೆ ನೋಟಿಸ್ ಬಂದಿತ್ತೋ ಇಲ್ಲವೋ ಗೊತ್ತಿಲ್ಲ. ನನಗೆ ಎಲ್ಲಾ ನಡವಳಿಕೆಗಳಲ್ಲಿಯೂ ನೋಟಿಸ್ ಬಂದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ನನ್ನ ಆಸ್ತಿ ಇದ್ದು ನಂತರ ಅರಣ್ಯ ಇದೆ. ಸದರಿ ಚಕ್ಕುಬಂದಿಯಲ್ಲಿ ನಾನು ವಾದಿಯ 20 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಒಟ್ಟು 5 ಎಕರೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಚಕ್ಕುಬಂದಿಯಲ್ಲಿ 4 ಎಕರೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನಾ ಅಥವಾ 20 ಗುಂಟೆ ಜಮೀನಿನ ಒತ್ತುವರಿ ಮಾಡಿಕೊಂಡು 5 ಎಕರೆ ಜಮೀನಿನ ಸ್ವಾಧೀನತೆ ಹೊಂದಿರುತ್ತೇನೋ ಎಂಬುದನ್ನು ದೃಢಪಡಿಸಲು ನ್ಯಾಯಾಲಯದ ಮೂಲಕ ಕಮಿಷನರ್ ರವರನ್ನು ನೇಮಕ ಮಾಡಲು ನನ್ನದು ತಕರಾರು ಇರುವುದಿಲ್ಲ. ವಾದಿಯ 20 ಗುಂಟೆ ಜಮೀನನ್ನು ಬಿಟ್ಟುಕೊಡಬೇಕಾಗುತ್ತದೆಂದು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಹೇಳಿದ ಪ್ರಾರ್ಥನೆ ಕಾನೂನುಬದ್ಧವಾಗಿದ್ದು ನಾನು ಅದರ ವ್ಯತಿರಿಕ್ತವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 37 ಎಕರೆ ಜಮೀನು ಪೋಡಿಯಾಗಿದ್ದು ಅದರಲ್ಲಿ ನಾನು ಖರೀದಿ ಮಾಡಿರುತ್ತೇನ ಎಂದರೆ ನಿಜ. ನಾನು ಅದರಲ್ಲಿ 6 ಎಕರೆ ಜಮೀನನ್ನು ಖರೀದಿ

ಮಾಡಿರುತ್ತೇನೆ. ಸದರಿ ಜಮೀನನ್ನು ನಾನು ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನಿಂದ ಖರೀದಿ ಮಾಡಿದ್ದು ಅದು ಅವರಿಗೆ ಭಾಗದಲ್ಲಿ ಬಂದಿರುತ್ತೋ ಇಲ್ಲವೋ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**